# ಪ್ರಜಾಪ್ರಭುತ್ವಕ್ಕೆ ಪಾಳೆಗಾರಿಕೆಯ ಕಳಂಕ

**ಪ್ರಜಾಪ್ರಭುತ್ವ ಅಂದರೆ ಪ್ರಜೆಗಳೇ ಪ್ರಭುಗಳು. ಹಾಗಿರಬೇಕಾದರೆ ಪ್ರಜೆ ಮೇಲೆ ಸಚಿವರೆನಿಸಿಕೊಂಡ ಪ್ರಜಾಪ್ರತಿನಿಧಿ ಕೈ ಮಾಡಬಹುದೇ? ಹೊಡೆದೂ ದಕ್ಕಿಸಿಕೊಳ್ಳುವಂತಹ ವ್ಯವಸ್ಥೆಯನ್ನು ಪ್ರಜಾಪ್ರಭುತ್ವ ಎಂದು ಕರೆದರೆ, ವ್ಯವಸ್ಥೆಗೆ ಮಾಡಿದ ಅವಮಾನ ಎಂದು ಅನಿಸುವುದಿಲ್ಲವೇ?**

ಮಹಿಳೆಯೊಬ್ಬರು ಸಾರ್ವಜನಿಕ ವೇದಿಕೆಯಲ್ಲಿ ತನ್ನ ನೆರೆಹೊರೆಯ ಅನೇಕರ ಎದುರು ಹೊಡೆತ ತಿಂದರು. ಹೀಗೆ ಹೊಡೆದದ್ದಕ್ಕೆ ನಿರಾಕರಿಸಲಾಗದಂತಹ ಪುರಾವೆಯೂ ಉಂಟು. ಅದನ್ನು ಕರುನಾಡಿನಾದ್ಯಂತ ಲಕ್ಷಾಂತರ ಮಂದಿ ನೋಡಿದ್ದಾರೆ. ಆದರೂ ತನಗೆ ಯಾರೂ ಹೊಡೆದೇ ಇಲ್ಲ ಎಂದು ಆ ಮಹಿಳೆ ಹೇಳುತ್ತಿದ್ದಾರೆ! ಕೆನ್ನೆಗೆ ಬಿದ್ದ ಹೊಡೆತ ಹೆಚ್ಚು ಅವಮಾನಕರವೋ ಅಥವಾ ಹೊಡೆಸಿಕೊಂಡೂ ತನಗೆ ಯಾರೂ ಹೊಡೆದೇ ಇಲ್ಲ ಎಂದು ಹೇಳುವಂತಹ ಸ್ಥಿತಿ ಹೆಚ್ಚು ಅವಮಾನಕರವೋ? ಇಂತಹದೊಂದು ಸ್ಥಿತಿ ಇದೆಯಲ್ಲ, ಇದನ್ನು ಏನಂತ ಕರೆಯಬಹುದು? ಇದಕ್ಕೆ ಕಾರಣ...?

ಪ್ರಜಾಪ್ರಭುತ್ವ ಅಂತ ಕರೆಯುತ್ತೇವೆ. ಪ್ರಜೆಗಳೇ ಪ್ರಭುಗಳು ಎನ್ನುತ್ತೇವೆ. ಹಾಗಿರಬೇಕಾದರೆ ಒಬ್ಬ ಪ್ರಜೆ ಮೇಲೆ ಸಚಿವರೆನಿಸಿಕೊಂಡ ಪ್ರಜಾಪ್ರತಿನಿಧಿಯು ಕೈ ಮಾಡಬಹುದೇ? ಹಾಗೆ ಹೊಡೆದು ದಕ್ಕಿಸಿಕೊಳ್ಳುವಂತಹ ವ್ಯವಸ್ಥೆಯನ್ನು ಪ್ರಜಾಪ್ರಭುತ್ವ ಎಂದು ಕರೆದರೆ ಜನರಿಂದ ಜನರಿಗಾಗಿ ಮತ್ತು ಜನರೇ ನಡೆಸುವಂತಹ ಈ ವ್ಯವಸ್ಥೆಗೆ ಮಾಡಿದ ಅವಮಾನ ಎಂದು ಅನಿಸುವುದಿಲ್ಲವೇ? ಇಲ್ಲ, ಹೆಚ್ಚಿನವರಿಗೆ ಹಾಗೆ ಅನಿಸುತ್ತಿಲ್ಲ ಎಂಬುದೇ ಈ ಬಗೆಯ ಸಕಲೆಂಟು ಸಮಸ್ಯೆಗಳ ಮೂಲ.

ನಿಜ ನುಡಿಯಲಾರದಂತಹ ಅಸಹಾಯಕ ಸ್ಥಿತಿಯಲ್ಲಿ ಈ ವ್ಯವಸ್ಥೆ ಈಗಲೂ ಅನೇಕರನ್ನು ಇರಿಸಿದೆ. ಅದರಲ್ಲಿ ಮಹಿಳೆಯರ ಪಾಲು ಹೆಚ್ಚು. ಇಂತಹ ಅಸಹಾಯಕರ ಬೆನ್ನಿಗೆ ನಿಲ್ಲಲು ಬೇಕಾದ ಸಾಮರ್ಥ್ಯವುಳ್ಳ ವರ್ಗಗಳು, ಸಂಘಟನೆಗಳು ಪಕ್ಷ, ಸಿದ್ಧಾಂತ, ಜಾತಿ–ಧರ್ಮದ ಹೆಸರಿನಲ್ಲಿ ವಿಭಜನೆಗೊಂಡಿವೆ, ಸ್ವಾರ್ಥದ ಲಾಭ–ನಷ್ಟಗಳ ಲೆಕ್ಕಾಚಾರದಲ್ಲಿ ಮೈಮರೆತಿವೆ. ಪರಿಣಾಮ: ಪ್ರಜಾಪ್ರಭುತ್ವದ ಹೆಸರಿನಲ್ಲಿ ಪಾಳೆಗಾರಿಕೆಯ ಭಂಡಕುಣಿತ.

ಜನರಿಗೆ ರಕ್ಷಣೆ ಕಲ್ಪಿಸುವುದಕ್ಕಾಗಿ ಇರುವ ಪೊಲೀಸ್ ಠಾಣೆಗಳಲ್ಲಿನ ಹೊಡೆತ–ಬಡಿತಗಳನ್ನು ಸಹಜ ಎಂಬಂತೆ ಒಪ್ಪಿಕೊಳ್ಳುವಂತೆ ಮಾಡಿರುವ ಮನಃಸ್ಥಿತಿಯು ಜನಪ್ರತಿನಿಧಿಗಳ ಈ ಬಗೆಯ ಕ್ರೌರ್ಯವನ್ನೂ ಮಾಮೂಲು ಸಂಗತಿಯೆಂಬಂತೆ ಒಪ್ಪಿಕೊಳ್ಳುವಂತೆ ಮಾಡಿದೆ ಎಂಬುದಕ್ಕೆ ಇಂತಹ ಪ್ರಕರಣಗಳು ನಿದರ್ಶನಗಳಾಗಿ ನಿಲ್ಲುತ್ತವೆ. ಇಂದು ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಗ್ರಾಮ. ಮೊನ್ನೆ ಬೆಂಗಳೂರು ಮಹಾನಗರ. ಹಂಗಳದಲ್ಲಿ ಸಚಿವ ಸೋಮಣ್ಣ ಅವರು ಮಹಿಳೆಯೊಬ್ಬರ ಕೆನ್ನೆಗೆ ಹೊಡೆದಿದ್ದಾರೆ. ಬೆಂಗಳೂರಿನಲ್ಲಿ ಮಾಜಿ ಸಚಿವ–ಹಾಲಿ ಶಾಸಕ ಅರವಿಂದ ಲಿಂಬಾವಳಿ ಅವರು ಮಹಿಳೆಯನ್ನು ಹೀನಾಯವಾಗಿ ನಿಂದಿಸಿದ್ದರು. ಇಬ್ಬರೂ ಆಡಳಿತ ಪಕ್ಷಕ್ಕೆ ಸೇರಿದ ಜನಪ್ರತಿನಿಧಿಗಳು. ಭಾರತೀಯ ಸಂಸ್ಕೃತಿಯ ಹಿರಿಮೆ ಬಗೆಗೆ ನಿತ್ಯಪಠಿಸುವ ಪಕ್ಷದ ಹಿರಿಯ ನಾಯಕರು.

ಈ ಬಗೆಯ ಸಂವೇದನಾಶೂನ್ಯ ವರ್ತನೆಗಳು ಪಕ್ಷಾತೀತವಾಗಿ ಖಂಡನೆಗೆ ಒಳಗಾಗಬೇಕು. ಇದರ ವಿರುದ್ಧ ಸಾರ್ವಜನಿಕರಿಂದ ಪ್ರತಿಭಟನೆ ದಾಖಲಾಗಬೇಕು. ಮಹಿಳಾ ಸಂಘಟನೆಗಳು ಧ್ವನಿ ಎತ್ತಬೇಕು. ಇವೆಲ್ಲಕ್ಕಿಂತ ಹೆಚ್ಚಿಗೆ ಅವರು ಪ್ರತಿನಿಧಿಸುವ ಪಕ್ಷವೇ ಕಿವಿಹಿಂಡಿ ಬುದ್ಧಿ ಹೇಳಬೇಕು. ಇವು ಯಾವುವೂ ಆಗದೇ ಇರುವುದರಿಂದ ಪಾಳೆಗಾರಿಕೆ ಪ್ರವೃತ್ತಿಯು ಸಮಷ್ಟಿ ಪ್ರಜ್ಞೆಗೆ ಗೆದ್ದಲು ಹತ್ತಿರುವುದರ ದ್ಯೋತಕವಾಗಿ ಬೇರೆ ಬೇರೆ ರೂಪಗಳಲ್ಲಿ ಪದೇ ಪದೇ ಪ್ರಕಟಗೊಳ್ಳುತ್ತಲೇ ಇದೆ. ಯಾವುದೋ ಕೆಟ್ಟ ಗಳಿಗೆ, ಎಡವಟ್ಟಾಗಿದೆ ಎಂದೇ ಭಾವಿಸೋಣ. ಆ ತಪ್ಪನ್ನು ಒಪ್ಪಿಕೊಂಡು ಮನಃಪೂರ್ವಕವಾಗಿ ಕ್ಷಮೆ ಯಾಚಿಸುವಂತಹ ಸೌಜನ್ಯವಾದರೂ ಇರಬೇಕು. ನಮ್ಮ ಜನಪ್ರತಿನಿಧಿಗಳಲ್ಲಿ ಅಂತಹ ಸೌಜನ್ಯವೂ ಉಳಿದಿಲ್ಲ ಎಂಬುದು ಅತ್ಯಂತ ದುರದೃಷ್ಟಕರ ಬೆಳವಣಿಗೆ.

ನಮ್ಮ ಇಡೀ ಚುನಾವಣಾ ವ್ಯವಸ್ಥೆಯು ಗೆಲ್ಲಬಲ್ಲ ಸಾಮರ್ಥ್ಯದ ಸುತ್ತ ಕೇಂದ್ರೀಕರಣವಾಗಿರುವುದು ಕೂಡ ಪುರುಷ ಅಹಂಕಾರಕ್ಕೆ ಪೋಷಣೆಯನ್ನು ಒದಗಿಸುತ್ತಿದೆ. ರಾಜಕೀಯಕ್ಕೆ ಮಹಿಳೆಯರ ಪ್ರವೇಶಕ್ಕೆ ತಡೆಗೋಡೆಯಾಗಿಯೂ ಪರಿಣಮಿಸಿದೆ. ರಾಜಕಾರಣದಲ್ಲಿ ಮಹಿಳೆಯರ ಪ್ರಾತಿನಿಧ್ಯ ಅಧಿಕವಾಗಬೇಕು. ಅವಕಾಶ ಪಡೆದವರು ತಮಗೆ ದಕ್ಕಿದ ಅಧಿಕಾರವನ್ನು ಮಹಿಳೆಯರ ಸಬಲೀಕರಣಕ್ಕೆ ಪರಿಣಾಮಕಾರಿಯಾಗಿ ಬಳಸಬೇಕು. ಆಗಮಾತ್ರ ಈ ಬಗೆಯ ಅವಮಾನ, ನೋವು, ಸಂಕಟಗಳು ಕೊಂಚಮಟ್ಟಿಗಾದರೂ ನಿವಾರಣೆ ಆಗಲು ಸಾಧ್ಯ.

ಸಾರ್ವಜನಿಕ ಜೀವನದಲ್ಲಿ ಇರುವವರಿಗೆ ಅತ್ಯಂತ ಅಗತ್ಯವಾಗಿ ಇರಬೇಕಾದ ಗುಣ ಸಂಯಮ. ಕಿಂಚಿತ್ ಸಹಾಯ, ನೆರವು ಯಾಚಿಸಿ ಬರುವ ಅಸಹಾಯಕರ ಅಳಲು ಆಲಿಸಬೇಕಾದುದು ಜನಪ್ರತಿನಿಧಿಯಾದವರ ಆದ್ಯ ಕರ್ತವ್ಯ. ಜನರ ದುಃಖ–ದುಮ್ಮಾನ ಕೇಳುವಷ್ಟು ತಾಳ್ಮೆ, ಸೌಜನ್ಯ ಇಲ್ಲದಿದ್ದರೆ ಅಂತಹವರು ಸಾರ್ವಜನಿಕ ಜೀವನದಿಂದ ದೂರ ಸರಿಯುವುದು ಅವರಿಗೂ ಒಳ್ಳೆಯದು, ವ್ಯವಸ್ಥೆಯ ಆರೋಗ್ಯಕ್ಕೂ ಒಳ್ಳೆಯದು. ರಾಜಕೀಯ ಪಕ್ಷಗಳ ಗುರಿ ಈಗ ಗೆಲುವೊಂದೇ ಆಗಿದೆ. ಸನ್ನಡತೆ, ಸೌಜನ್ಯದ ಪಾಠ ಹೇಳುವುದನ್ನು ಅವು ಮರೆತು ಎಷ್ಟೋ ವರ್ಷಗಳಾಗಿವೆ. ಮತದಾರನಿಗೆ ತನ್ನ ಮತದ ಮಹತ್ವ ಅರಿಯಲು ಇಂತಹ ಪ್ರಸಂಗಗಳು ಕಹಿಗುಳಿಗೆ ಆಗಲಿ.

**■ ಎನ್. ಉದಯಕುಮಾರ್**



ಈಶ್ವರ್